ವೇತನಕ್ಕೆ ಕೊರತೆಯಾಗುವ ಹಣಕ್ಕೆ ಸದರಿ ಪಟ್ಟಣ ಪಂಚಾಯತ್‌ನಿಂದ ಬೇಡಿಕೆ ಪಡೆದು ಪರಿಷ್ಕರಿಸಿ ಬಿಡುಗಡೆಯಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು, ಅಂತೆಯೇ 2009–10ನೇ ಸಾಲಿಗೆ ಪಟ್ಟಣ ಪಂಚಾಯತಿಯ ಬೇಡಿಕೆಯಂತೆ ರೂ.17.63 ಲಕ್ಷಗಳನ್ನು ನಿಗದಿಗೊಳಿಸಿದೆ.

ಕರ್ನಾಟಕ ವಿಧಾನ ಸಭೆ

373 ಶ್ರೀ ವಸಂತಬಂಗೇರ ಕೆ

ಮಾನ್ಯ ಲೋಕೋಪಯೋಗಿ ಸಚಿವರು

ಅ) ಬೆಳ್ತಂಗಡಿ ತಾಲ್ಲೂಕಿನ ಉಪ್ಪಿನಂಗಡಿ–ಗುರುವಾಯನಕೆರೆ ರಾಜ್ಯ ಹೆದ್ದಾರಿಯು ಸಂಪೂರ್ಣ ಹದಗೆಟ್ಟಿದ್ದು, ಈ ರಸ್ತೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಅಭಿವೃದ್ಧಿ ಕಾಮಗಾರಿಗೆ ಸರ್ಕಾರದಿಂದ ಹಣ ಮಂಜೂರಾಗಿದೆಯೇ; ಹಾಗಿದ್ದಲ್ಲಿ, ಮಂಜೂರಾದ ಅನುದಾನವೆಷ್ಟು;

ಇ) ಮಂಜೂರು ಆಗಿಲ್ಲವಾದರೆ, ಯಾವಾಗ ಹಣ ಮಂಜೂರು ಮಾಡಲಾಗುವುದು?

ರಾಜ್ಯ ಹೆದ್ದಾರಿ–118 ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರಪಳಿ ಕಿ.ಮೀ 0.00ರಿಂದ 24.00ರವರೆಗೆ ಇದ್ದು, ಉಪ್ಪಿನಂಗಡಿ–ಗುರುವಾಯನಕೆರೆ ಇನ್ನಿತರ ಪ್ರಮುಖ ಗ್ರಾಮಗಳ ಮುಖಾಂತರ ಹಾದುಹೋಗುತ್ತದೆ.

ಈ ರಸ್ತೆಯಲ್ಲಿ ಹಾಳಾಗಿರುವ ಭಾಗವಾದ ಸರಪಳಿ ಕಿ.ಮೀ 0.00ರಿಂದ 3.50ರವರೆಗಿನ ರಸ್ತೆ ಅಭಿವೃದ್ಧಿಗಾಗಿ ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ರೂ.170.00 ಲಕ್ಷಗಳ ಮೊತ್ತ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಕಾಮಗಾರಿಯನ್ನು ಸಧ್ಯದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು.

2008–09ನೇ ಸಾಲಿನಲ್ಲಿ ರೂ.51.27 ಲಕ್ಷಗಳ ಮೊತ್ತದಲ್ಲಿ ಈ ರಸ್ತೆಯ ನಿರ್ವಹಣೆ ಮಾಡಲಾಗಿದ್ದು, ಗುಂಡಿ ರಹಿತವಾಗಿರಿಸಲಾಗಿದೆ. ಪ್ರಸಕ್ತ 2009–10ನೇ ಸಾಲಿನಲ್ಲಿ ಮುಂಗಾರು ಪೂರ್ವ ನಿರ್ವಹಣೆಗಾಗಿ ರೂ.3.14 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ರಸ್ತೆಯ ಉಳಿದ ಭಾಗಗಳ ಅಭಿವೃದ್ಧಿಯನ್ನು ಅನುದಾನದ ಲಭ್ಯತೆಯನ್ನಾಧರಿಸಿ ಭವಿಷ್ಯದಲ್ಲಿ ಕೈಗೆತ್ತಿಕೊಳ್ಳಲಾಗುವುದು.

KARNATAKA LEGISLATIVE ASSEMBLY

UnStarred Question No. :373
Name of the Member :Sri Vasantha Bangera K.
Date of Raply :14-07-2009
Minister to Reply :Minister for Public Works

a) Uppinangadi-Guruvayanakere State Highway in Belthangadi taluk having deteriorated completely, actions taken by the Government to develop this road;

b) Whether funds have been sanctioned by the government for this development work; If so, what is the quantum of funds sanctioned;

c) If not sanctioned, when funds will be sanctioned?

The chainage from km 0.00 to 24.00 of State Highway-118 is in Belthangadi taluk which passes through Uppinangadi, Guruvayanakere and other prominent villages.

Rs.17.00 lakhs has been sanctioned under Central Road Fund for development of damaged portion of this road from chainage 0.00 km to 24.00 km, the tender process is in progress and the work will be taken up in due course.

This road has been maintained at a cost of Rs.51.27 lakhs during 2008-09, is kept pothole free. Rs.3.14 lakhs has been released during the present year 2009-10 for pre-monsoon maintenance, the works are under progress.

The development of remaining parts of this road will be undertaken in future depending upon the availability of funds.

ಕರ್ನಾಟಕ ವಿಧಾನ ಸಭೆ

13ನೇ ವಿಧಾನ ಸಭೆ

3ನೇ ಅಧಿವೇಶನ

376ಶ್ರೀ ನಾಡಗೌಡ ವೆಂಕಟರಾವ್(ಸಿಂಧನೂರು)

ಶ್ರೀ ಬಂಡೆಪ್ಪ ಕಾಶೆಂಪೂರ್(ಬೀದರ್ ದಕ್ಷಿಣ) ಮಾನ್ಯ ಲೋಕೋಪಯೋಗಿ ಸಚಿವರು

ಅ) ಕುಮಾರಕೃಪ ರಸ್ತೆಯಲ್ಲಿರುವ ಅನುಗ್ರಹ ವಸತಿ ಗೃಹವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹಂಚಿಕೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಈ ವಸತಿಗೃಹಕ್ಕೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಟೆಂಡರ್ ಕರೆಯಲಾಗಿದೆಯೇ; ಇದರ ಅಂದಾಜು ಮೊತ್ತವೆಷ್ಟು;

ಕುಮಾರಕೃಪ ರಸ್ತೆಯಲ್ಲಿರುವ ಅನುಗ್ರಹ ವಸತಿಗೃಹವು ಸನ್ಮಾನ್ಯ ಮುಖ್ಯಮಂತ್ರಿಯವರ ನಾಮನಿರ್ದೇಶಿತ ವಸತಿಗೃಹವಾಗಿರುತ್ತದೆ. ಸದರಿ ನಿವಾಸದ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ ರೂ. 45.15 ಲಕ್ಷಗಳು. ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಆ) ಮೇಲ್ಕಂಡ ವಸತಿಗೃಹ ಹಂಚಿಯಾಗಿದೆಯೇ ಕಾಮಗಾರಿ ಕೈಗೊಳ್ಳಲು ನಿಯಮಾವಳಿ ರೀತ್ಯಾ ಅವಕಾಶವಿದೆಯೇ;

ಕುಮಾರಕೃಪ ರಸ್ತೆಯಲ್ಲಿರುವ ಅನುಗ್ರಹ ವಸತಿ ಗೃಹದ ಸ್ಥಿತಿಗತಿಯನ್ನು ಪರಿಗಣನೆಗೆ ತೆಗೆದುಕೊಂಡು ಅವಶ್ಯಕವಾದ ಕಾಮಗಾರಿಗಳಾದ ಮೋಟಾರ್ ದುರಸ್ತಿ, ಒಳಚರಂಡಿ ದುರಸ್ತಿ, ನೀರು ಸರಬರಾಜು ಪರಿಕರಗಳು ಹಾಗೂ ಶೌಚಾಲಯ ಪರಿಕರಗಳ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿರುತ್ತದೆ.